ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

ವಿದೇಶಿ ಪ್ರಜೆಗಳ ಅತಿಕ್ರಮ ವಾಸ ಮತ್ತು ಡ್ರಗ್ಸ್ ದಂಧೆ ಬಗ್ಗೆ

ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):-

358(435) ಮಾನ್ಯ ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಮ್ಮ ರಾಜ್ಯದಲ್ಲಿ ಎಷ್ಟು ವಿದೇಶಿ ಪ್ರಜೆಗಳು ಅವಧಿ ಮೀರಿ ವಾಸವಾಗಿದ್ದಾರೆ : (ಜಿಲ್ಲಾವಾರು ಅವರ ಹೆಸರು ಮತ್ತು ರಾಷ್ಟ್ರೀಯತೆಯ ವಿವರಗಳನ್ನು ನೀಡುವುದು)

(ಆ) ಡ್ರಗ್ಸ್ ಮಾರಾಟಕ್ಕಾಗಿ ಎಷ್ಟು ಜನ ವಿದೇಶಿಯರನ್ನು ದಸ್ತಗಿರಿ ಮಾಡಲಾಗಿದೆ ;

(ಇ) ಅವರನ್ನು ಪತ್ತೆ ಹಚ್ಚಿ ಆಯಾ ದೇಶಗಳಿಗೆ ಗಡೀಪಾರು ಮಾಡಲು ಒಳಾಡಳಿತ ಇಲಾಖೆಯು ತೆಗೆದುಕೊಂಡ ಕ್ರಮವೇನು ?